# ಯಶಸ್ಸಿನ ಬೆನ್ನೇರಿ ಇಣುಕಿದ ಕೇಡು

'ಇನ್ನು ಇನ್ನೊಂದು ವಿಷಯ ಹೇಳಬೇಕು. ನಿಮ್ಮ ಪ್ರಭಾಕರ ಅವರು ನನ್ನೊಂದಿಗಿದ್ದು ಎಲ್ಲಾ ವಿಷಯವನ್ನು ಈಗ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅವರಿಗೆ ಇಡೀ ಸೀತಾಪುರದ ವೈಶಿಷ್ಟ್ಯಗಳು ಗೊತ್ತು. ಅವರಿಗೆ ನನ್ನ ಯೋಜನೆಯ ವಿಚಾರ ಈಗ ಗೊತ್ತಾಗಿದೆ. ಹಾಗಾಗಿ ಪ್ರಭಾಕರ ಅವರು ಸಂದೇಶ್ ಮತ್ತು ನವ್ಯ ಅವರ ಇನ್ನೆರಡು ವಾರಗಳ ಕಾರ್ಯಕ್ರಮಗಳನ್ನು ರೂಪಿಸುತ್ತಾರೆ. ಸಂದೇಶ್ ಮತ್ತು ನವ್ಯ ಯಾರನ್ನೆಲ್ಲಾ ಭೇಟಿಯಾಗಬೇಕು, ಯಾವ ವಿಶೇಷವನ್ನು ಪ್ರದರ್ಶಿಸಬೇಕು ಇತ್ಯಾದಿ ನಿರ್ಧಾರಗಳನ್ನು ಪ್ರಭಾಕರ ಅವರು ಮಾಡುತ್ತಾರೆ. ನಿಮಗೆ ಸಂದೇಶ್ ಹಾಗೂ ನವ್ಯರನ್ನು ಭೇಟಿಯಾಗಬೇಕಿದ್ದಲ್ಲಿ ಪ್ರಭಾಕರರನ್ನು ಸಂಪರ್ಕಿಸಬೇಕೆಂದು ಕೋರಿಕೆ' ಅಂದ.

ಪ್ರಭಾಕರ ವಿನೀತನಾಗಿ ತಲೆಬಾಗಿ ಸಂಜಯನಿಗೆ ಕೈಮುಗಿದ. ಸಂಜಯ್ ಪ್ರಭಾಕರನಿಗೆ ರೆಕಾರ್ಡ್ ಮಾಡಿದ್ದನ್ನು ಅಪ್‌ಲೋಡ್ ಮಾಡಲು ಹೇಳಿದ.

ಜನ ಒಬ್ಬೊಬ್ಬರಾಗಿ ಸಭೆಯಿಂದ ಎದ್ದುಬಂದು, 'ಕಾರಂತರೇ, ನೀವು ಏನು ಹೇಳುತ್ತೀರೋ ಅದನ್ನು ನಾವು ಮಾಡುತ್ತೇವೆ' ಎನ್ನತೊಡಗಿದರು. ಒಂದಷ್ಟು ಜನ ಪ್ರಭಾಕರನ ಹಿಂದೆ ಬಿದ್ದರೆ ಇನ್ನು ಕೆಲವರು ಸಂದೇಶ್ ಮತ್ತು ನವ್ಯಳ ಜೊತೆ ಗುರುತಿಸಿಕೊಳ್ಳಲು ಮುಂದಾದರು. ಎಲ್ಲರ ಮುಂದೆ ಮುಂದಿನ ದಿನಗಳ ಕನಸು ಹೂಮಳೆ ಕರೆಯುತ್ತಿತ್ತು.

ಶೆಟ್ಟರು ಸಂಜಯ್ ಪಕ್ಕಕ್ಕೆ ಬಂದು ಕೈಮುಗಿದು, 'ಕಾರಂತರೇ, ನನಗೆ ಇವತ್ತು ನಾಲಿಗೆಯೇ ಬಿದ್ದುಹೋದ ಹಾಗಾಗಿದೆ. ಅಂದರೆ ಅಷ್ಟು ಖುಷಿ. ನನ್ನ ಅಳಿಯ ಪಿ.ಯು.ಸಿ.ಯಲ್ಲಿ ಫೇಲ್ ಆಗಿ ಹಳ್ಳಿಯಲ್ಲೇ ತಿರುಗುತ್ತಿದ್ದ ಉಂಡಾಡಿ. ಈಗ ನೋಡಿದರೆ ಅವನನ್ನು ನೀವು ಇಡೀ ಸೀತಾಪುರಕ್ಕೆ ಹೊಸ ರೀತಿಯಲ್ಲಿ ಪರಿಚಯಿಸಿ ಮನುಷ್ಯನನ್ನಾಗಿ ಮಾಡಿದ್ದೀರಿ. ನಿಮ್ಮ ಉಪಕಾರ ಯಾವಾಗಲೂ ಮರೆಯುವುದಿಲ್ಲ' ಅಂದರು.

ಸಂಜಯ್ ಶೆಟ್ಟರ ಕೈಹಿಡಿದು 'ನಿಮ್ಮ ಅಳಿಯ ಹೊಸ ಸೀತಾಪುರದ ನಾಯಕನಾಗುತ್ತಾನೆ ನೋಡಿ' ಅಂದ. ಅಷ್ಟರಲ್ಲಿ ಆನಂದಣ್ಣ ಇವರಿಬ್ಬರ ನಡುವೆ ಬಂದರು.

ಆನಂದಣ್ಣ 'ಕಾರಂತರೇ, ನನ್ನ ಜೀವನದಲ್ಲಿ ಇವತ್ತಿನ ಹಾಗೆ ಇದ್ದ ಇನ್ನೊಂದು ದಿನವೇ ಇರ್ಲಿಲ್ಲ. ನಿಮಗೆ ಎಷ್ಟು ಧನ್ಯವಾದ ಹೇಳಿದರೂ ಕಡಿಮೆಯೇ. ಅಂದಹಾಗೆ ಇವತ್ತಿನ ಮೀಟಿಂಗ್ ಸೋಶಿಯಲ್ ಮೀಡಿಯಾದಲ್ಲಿ ಯಾಕೆ ಹಾಕ್ತೀರಿ?' ಅಂದರು.

ಸಂಜಯ್ ಆನಂದಣ್ಣನನ್ನು ನೋಡಿ

